ಈ ಲೇಖನದ ವಿಷಯಾನುಕ್ರಮಣಿಕೆ


ಪ್ರಾಯಿಕತ್ವ ಎಂಬ ಶಬ್ದದ ಅರ್ಥದ ಕುರಿತ ಚರ್ಚೆ 2

ವಿಷಯ 3

ಸಮಸ್ಯೆಗಳು 9

ಪ್ರಾಯಿಕತ್ವ ಎಂದರೆ ಪ್ರಾಚುರ್ಯ ಎಂದೇ ಅರ್ಥ 12

ಪ್ರಾಧಾನ್ಯ ಎಂಬ ಅರ್ಥ ಎಲ್ಲಿಯೂ ಇಲ್ಲ 14

ಪ್ರಾಚುರ್ಯ ಎಂದು ಆಚಾರ್ಯರೇ ಅರ್ಥ ಹೇಳಿದ್ದಾರೆ 17

ಆಚಾರ್ಯರ ಪ್ರಯೋಗಗಳು 18

ಪದ್ಮನಾಭತೀರ್ಥರೂ ಪ್ರಾಚುರ್ಯ ಎಂದೇ ಹೇಳಿದ್ದಾರೆ 20

ಯಾದವಾರ್ಯರ ವ್ಯಾಖ್ಯಾನವನ್ನು ಹೊಂದಿಸುವ ರೀತಿ 22

ಕರ್ಮಕ್ಷಯವೇ ವಿಸ್ತಾರವಾಗಿ ನಿರೂಪಿತವಾಗಿರುವದು 27

ಸೂತ್ರಗಳಲ್ಲಿ ಅಕ್ಷರಗಣನೆಯ ಸಾಂಪ್ರದಾಯಿಕ ಕ್ರಮ 30

ಎಲ್ಲದರ ಸಂಗ್ರಹ 33

# ವಿಶ್ವನಂದಿನಿ ಲೇಖನಮಾಲೆ – 214

## ಪ್ರಾಯಿಕತ್ವ ಎಂಬ ಶಬ್ದದ ಅರ್ಥದ ಕುರಿತ ಚರ್ಚೆ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ
ಪರಮಪವಿತ್ರವಿದ್ಯಾಪರಂಪರೆಯಾದ,
ಶ್ರೀ ರಾಜೇಂದ್ರತೀರ್ಥಶ್ರೀಪಾದಗಂಗಳವರ
ಪೂರ್ವಾದಿಮಠದ
ಶ್ರೀಮದ್ ವ್ಯಾಸರಾಜಂಸಸ್ಥಾನದ,
ಶ್ರೀಮದ್ ವಿದ್ಯಾಕರ್ಣಾಟಕ-
ಸಿಂಹಾಸನಾಧೀಶ್ವರರಾದ
ತಮ್ಮ ಪರಮಾದ್ಭುತ ಜ್ಞಾನವೈಭವದಿಂದ
ಇಂದಿಗೂ ಮತ್ಸರಿಗಳ ಕಣ್ಣುಕುಕ್ಕುವಂತೆ
ವಿದ್ವತ್ಪ್ರಪಂಚದಲ್ಲಿ  ಪ್ರಕಾಶಮಾನರಾಗಿರುವ
ಶ್ರೀಮದ್ ರಾಮಚಂದ್ರತೀರ್ಥಶ್ರೀಪಾದಂಗಳವರ
ಆರಾಧನೆಯ ನಿಮಿತ್ತ ಅವರ ವಿದ್ಯಾವೈಭವದ
ದ್ಯೋತಕವಾಗಿರುವ ಒಂದು ಶಾಸ್ತ್ರಚರ್ಚೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಬ್ರಹ್ಮಸೂತ್ರಭಾಷ್ಯದ ನಾಲ್ಕನೆಯ ಅಧ್ಯಾಯದ ಆರಂಭದಲ್ಲಿ **“ಪ್ರಾಯಿಕತ್ವಾತ್ ಅಧ್ಯಾಯಾನಾಂ ಪಾದಾನಾಂ ಚ ನ ವಿರೋಧಃ”** ಎಂದು ಹೇಳಿದ್ದಾರೆ. ಇದನ್ನೇ ಅನುಸರಿಸಿ ಶ್ರೀಮಟ್ಟೀಕಾಕೃತ್ಪಾದರು ಶ್ರೀಮನ್ ನ್ಯಾಯಸುಧಾಗ್ರಂಥದಲ್ಲಿ **“ಅಧ್ಯಾಯಾದಿ ವ್ಯವಸ್ಥಾ ಚ ಪ್ರಾಯಿಕತ್ವಾದುಪಪದ್ಯತೇ”** ಎಂದು ಹೇಳಿದ್ದಾರೆ.

ಈ ಎರಡು ಕಡೆಯಲ್ಲಿರುವ ಪ್ರಾಯಿಕತ್ವ ಎಂಬ ಶಬ್ದದ ಅರ್ಥವೇನು ಎನ್ನುವದರ ಕುರಿತ ವಿಸ್ತೃತ ಚರ್ಚೆ ಇಲ್ಲಿದೆ.

## ವಿಷಯ

ಬ್ರಹ್ಮಸೂತ್ರಗಳಲ್ಲಿ ನಾಲ್ಕು ಅಧ್ಯಾಯಗಳು, ಒಂದೊಂದು ಅಧ್ಯಾಯದಲ್ಲಿ ನಾಲ್ಕು ನಾಲ್ಕು ಪಾದಗಳು. ಒಂದೊಂದು ಪಾದಕ್ಕೂ, ಒಂದೊಂದು ಅಧ್ಯಾಯಕ್ಕೂ ಪ್ರತ್ಯೇಕವಾದ ವಿಷಯಗಳಿವೆ. ಮೊದಲನೆಯ ಅಧ್ಯಾಯ ದೇವರು ಅನಂತ ಗುಣಪರಿಪೂರ್ಣ ಎಂದು ಪ್ರತಿಪಾದಿಸುತ್ತದೆ.

ಎರಡನೆಯ ಅಧ್ಯಾಯ ದೇವರಲ್ಲಿ ಯಾವ ದೋಷಗಳಿಲ್ಲ ಎಂದು ಪ್ರತಿಪಾದಿಸುತ್ತದೆ. ಮೂರನೆಯ ಅಧ್ಯಾಯ ಆ ದೇವರನ್ನು ಪಡೆಯಲು, ಕಾಣಲು ಬೇಕಾದ ಸಾಧನಗಳನ್ನು ತಿಳಿಸುತ್ತದೆ. ನಾಲ್ಕನೆಯ ಅಧ್ಯಾಯ ದೇವರ ಜ್ಞಾನವನ್ನು ಪಡೆಯುವದರಿಂದ ಉಂಟಾಗುವ ಫಲದ ಕುರಿತು ತಿಳಿಸುತ್ತದೆ.

ಹೀಗೆ ನಾಲ್ಕನೆಯ ಅಧ್ಯಾಯದ ವಿಷಯ ಫಲ. ಆ ಫಲವೂ ನಾಲ್ಕು ರೀತಿಯಾದದ್ದು, ಕರ್ಮಕ್ಷಯ, ಉತ್ಕ್ರಾಂತಿ, ಮಾರ್ಗ ಮತ್ತು ಭೋಗ ಎಂದು. ಅಪರೋಕ್ಷಜ್ಞಾನಿಯ ಹಿಂದಿನ ಎಲ್ಲ ಕರ್ಮಗಳು ಯಾವ ರೀತಿ ನಾಶವಾಗುತ್ತವೆ ಎನ್ನುವದನ್ನು ತಿಳಿಸುವದು ಮೊದಲನೆಯ ಪಾದದ ವಿಷಯ. ಆ ಅಪರೋಕ್ಷಜ್ಞಾನಿಯ ಚರಮದೇಹದ ನಾಶ ಯಾವ ರೀತಿ ಆಗುತ್ತದೆ ಎನ್ನುವದು ಎರಡನೆಯ ಪಾದದ ವಿಷಯ. ಆ ಅಪರೋಕ್ಷಜ್ಞಾನಿಯು ಪರಮಾತ್ಮನನ್ನು ಸೇರುವ ಮಾರ್ಗವನ್ನು ತಿಳಿಸುವದು ಮೂರನೆಯ ಪಾದದ ವಿಷಯ. ಆ ಅಪರೋಕ್ಷಜ್ಞಾನಿಯು ಮುಕ್ತನಾಗಿ ಅನುಭವಿಸುವ ಭೋಗಗಳನ್ನು ನಿರೂಪಿಸುವದು ನಾಲ್ಕನೆಯ

ಪಾದದ ವಿಷಯ. ಹೀಗೆ ನಾಲ್ಕು ಫಲಗಳನ್ನು ನಾಲ್ಕನೆಯ ಅಧ್ಯಾಯದ ನಾಲ್ಕು ಪಾದಗಳಲ್ಲಿ ಶ್ರೀ ವೇದವ್ಯಾಸದೇವರು ನಿರೂಪಿಸುತ್ತಾರೆ.

ಮೊದಲನೆಯ ಪಾದದ ವಿಷಯ ಕರ್ಮಕ್ಷಯ. ಅಪರೋಕ್ಷಜ್ಞಾನಿಯ ಸಂಚಿತ ಕರ್ಮಗಳು ಮತ್ತು ಆಗಾಮಿಕರ್ಮಗಳು ಹೇಗೆ ನಾಶವಾಗುತ್ತವೆ ಎನ್ನುವದನ್ನು ನಿರೂಪಿಸುವ ಪಾದ. ಆದರೆ ಈ ಪಾದದಲ್ಲಿ ಕರ್ಮಕ್ಷಯ ಒಂದೇ ನಿರೂಪಿತವಾಗಿಲ್ಲ. ಮೂರನೆಯ ಅಧ್ಯಯದ ವಿಷಯವಾದ ಸಾಧನೆಯೂ ನಿರೂಪಿತವಾಗಿದೆ.

ಈ ಪಾದದಲ್ಲಿ ಒಂಟು ಎಂಟು ಅಧಿಕರಣಗಳು. ಅದರಲ್ಲಿ ಏಳು ಅಧಿಕರಣಗಳಲ್ಲಿ ಸಾಧನೆಯನ್ನೇ ವೇದವ್ಯಾಸದೇವರು ಹೇಳಿದ್ದಾರೆ. ಕಡೆಯ ಎಂಟನೆಯ ಅಧಿಕರಣದಲ್ಲಿ ಮಾತ್ರ ಕರ್ಮಕ್ಷಯವನ್ನು ಹೇಳಿದ್ದಾರೆ.

ಕರ್ಮಗಳ ನಾಶವನ್ನು ತಿಳಿಸುವ ಪಾದದಲ್ಲಿ ಸಾಧನೆಯನ್ನು ಯಾಕಾಗಿ ನಿರೂಪಿಸಿದರು? ಸಾಧನೆ ಹಾಗೂ ಕರ್ಮಕ್ಷಯ ಎರಡೂ ಸಹಿತ ಈ

ಪಾದದಲ್ಲಿ ಹೇಳಲ್ಪಟ್ಟಾಗ ಇದನ್ನು ಕರ್ಮಕ್ಷಯ ಪಾದ ಎಂದು ವಿಭಾಗ ಮಾಡುವದು ಎಷ್ಟರ ಮಟ್ಟಿಗೆ ಸರಿ ಎನ್ನುವದು ಎರಡು ಪ್ರಶ್ನೆಗಳು.

ಮೊದಲನೆಯ ಪ್ರಶ್ನೆಗೆ ಆಚಾರ್ಯರು ನೀಡಿರುವ ಉತ್ತರಗಳು ಹೀಗಿವೆ — ಮೂರನೆಯ ಅಧ್ಯಾಯದಲ್ಲಿ ತಿಳಿಸುವ ಸಾಧನೆಗಳಿಗೂ, ನಾಲ್ಕನೆಯ ಅಧ್ಯಾಯದ ಮೊದಲ ಪಾದದಲ್ಲಿ ತಿಳಿಸುತ್ತಿರುವ ಸಾಧನೆಗಳಿಗೂ ಮಹತ್ತರ ವ್ಯತ್ಯಾಸವಿದೆ. ಕೆಲವು ಸಾಧನೆಗಳನ್ನು ವಿಘ್ನಗಳಿದ್ದಾಗ, ಕಷ್ಟವಿದ್ದಾಗ ಮಾಡಲು ಸಾಧ್ಯವಿಲ್ಲ. ಸಕಲವಿಧವಾದ ವಿಘ್ನಗಳಿದ್ದಾಗಲೂ ಯಾವ ಸಾಧನೆಯನ್ನು ಬಿಡಲೇ ಬಾರದೋ, ಅವಶ್ಯವಾಗಿ ಅನುಷ್ಠಾನ ಮಾಡಲೇಬೇಕೋ, ಯಾವುದನ್ನು ನಿರಂತರವಾಗಿ ಆಚರಿಸಬೇಕೋ, ಯಾವ ಸಾಧನೆಯ ನಂತರವೇ ಫಲ ದೊರೆಯುತ್ತದೆಯೋ ಅಂತಹ ಸಾಧನೆಯನ್ನು ಇಲ್ಲಿ ಹೇಳುತ್ತಿದ್ದಾರೆ. ಮತ್ತು ಕರ್ಮಕ್ಷಯ ಮುಂತಾದ ಫಲವನ್ನು ಪಡೆದ ಬಳಿಕವೂ ಯಾವ ಸಾಧನೆಯನ್ನು ಮಾಡಬೇಕೋ ಆ ಸಾಧನೆಯನ್ನು ಇಲ್ಲಿ ನಿರೂಪಿಸುತ್ತಿದ್ದಾರೆ. ಹೀಗೆ ಈ ಸಾಧನೆಗಳಿಗೆ ಫಲದ ಜೊತೆಯಲ್ಲಿ ಎರಡು

ರೀತಿಯ ಸಂಬಂಧವರುವದರಿಂದ ಫಲವನ್ನು ನಿರೂಪಿಸಿವ ಅಧ್ಯಾಯದಲ್ಲಿಯೇ ಸಾಧನೆಯನ್ನು ನಿರೂಪಿಸುತ್ತಿದ್ದಾರೆ.

ಹಾಗಾದರೆ ಸಾಧನೆ ಮತ್ತು ಕರ್ಮನಾಶ ಎಂಬ ಫಲ ಎರಡನ್ನೂ ನಿರೂಪಿಸಿದ ಬಳಿಕ ಈ ಪಾದವನ್ನು ಕರ್ಮನಾಶದ ಪಾದ ಎಂದಷ್ಟೇ ಹೇಗೆ ಕರೆಯಲು ಸಾಧ್ಯ? ಎಂಬ ಎರಡನೆಯ ಪ್ರಶ್ನೆಗೆ ಶ್ರೀಮದಾಚಾರ್ಯರು ನೀಡಿದ ಉತ್ತರ — ಪ್ರಾಯಿಕತ್ವಾತ್ ಅಧ್ಯಾಯನಾಂ ಪಾದಾನಾಂ ಚ ನ ವಿರೋಧಃ ಎಂದು. ಇದನ್ನೇ ಟೀಕಾಕೃತ್ಪಾದರೂ ಸಹಿತ ನ್ಯಾಯಸುಧಾದಲ್ಲಿ ಅಧ್ಯಾಯಾದಿವ್ಯವಸ್ಥಾ ಚ ಪ್ರಾಯಿಕತ್ವಾದುಪಪದ್ಯತೆ ಇತಿ ಎಂದು ಹೇಳಿದ್ದಾರೆ.

ಯಾವ ಅಧ್ಯಾಯದಲ್ಲಿ, ಯಾವ ಪಾದದಲ್ಲಿ ಯಾವುದನ್ನು ಹೆಚ್ಚು ಹೇಳಿದ್ದಾರೆಯೋ ಅದನ್ನು ಆಧರಿಸಿ ಅಧ್ಯಾಯ ಪಾದಗಳನ್ನು ವಿಂಗಡಿಸಬೇಕು.

ಕರ್ಮಕ್ಷಯಪಾದದಲ್ಲಿ ಸಾಧನೆಗಿಂತಲೂ ಹೆಚ್ಚಾಗಿ ಕರ್ಮಕ್ಷಯವನ್ನೇ ಹೇಳಿದ್ದಾರೆ ಆದ್ದರಿಂದ ಇದಕ್ಕೆ ಕರ್ಮಕ್ಷಯ ಪಾದ ಎಂದು ಹೆಸರು ಬರುತ್ತದೆ.

ಇಷ್ಟು ವಿಷಯ.

## ಸಮಸ್ಯೆಗಳು

ಇಲ್ಲಿ ಪ್ರಾಯಿಕತ್ವಾತ್ ಎನ್ನುವ ಶಬ್ದದ ಕುರಿತು ಈಗ ನಾವು ಚರ್ಚೆ ಮಾಡಬೇಕು.

ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಪ್ರಾಚುರ್ಯ (ಹೆಚ್ಚಾಗಿರುವದು) ಎಂಬ ಅರ್ಥವನ್ನು ಶ್ರೀ ರಾಮಚಂದ್ರತೀರ್ಥಶ್ರೀಪಾದಂಗಳವರು ಹೇಳಿದ್ದಾರೆ. ಯಾವ ಅಧ್ಯಾಯದಲ್ಲಿ ಯಾವುದನ್ನು ಹೆಚ್ಚು ಹೇಳಿದ್ದಾರೆಯೋ ಅದು ಆ ಅಧ್ಯಾಯದ ವಿಷಯ ಎಂದು ಅವರು ನಿರ್ಣಯಿಸಿದ್ದಾರೆ.

ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಪ್ರಾಧಾನ್ಯ (ಮುಖ್ಯವಾದದ್ದು) ಎಂಬ ಅರ್ಥವನ್ನು ಶ್ರೀ ಯಾದವಾರ್ಯರು[1] ಹೇಳಿದ್ದಾರೆ. ಯಾವ ಅಧ್ಯಾಯದಲ್ಲಿ ಯಾವುದನ್ನು ಪ್ರಧಾನವಾಗಿ ಹೇಳಿದ್ದಾರೆಯೋ ಅದು ಆ ಅಧ್ಯಾಯದ ವಿಷಯ ಎಂದು ಅವರ ಅಭಿಪ್ರಾಯ.

---

[1] ಶ್ರೀ ರಘೂತ್ತಮತೀರ್ಥರು ತತ್ವಪ್ರಕಾಶಿಕಾ ಬಾವಭೋಧದಲ್ಲಿ ಪ್ರಾಯೇಣ ಎನ್ನುವದಕ್ಕೆ ವ್ಯಾಖ್ಯಾನವನ್ನು ಮಾಡಬೇಕಾದರೆ ಪ್ರಾಧಾನ್ಯೇನ ಎಂದೇ ವ್ಯಾಖ್ಯಾನ ಮಾಡಿದ್ದಾರೆ. ಅದೇ ಶಬ್ದವನ್ನು ಯಾದವಾರ್ಯರು, ಶ್ರೀನಿವಾಸತೀರ್ಥರು ತಮ್ಮ ವ್ಯಾಖ್ಯಾನಗಳಲ್ಲಿ ಬಳಸಿದ್ದಾರೆ.

ವಸ್ತುಸ್ಥಿತಿಯಲ್ಲಿ ಶ್ರೀ ರಾಮಚಂದ್ರತೀರ್ಥ-ಶ್ರೀಪಾದಂಗಳವರಿಗೂ ಯಾದವಾರ್ಯರಿಗೂ ವಿರೋಧವೇ ಇಲ್ಲ ಎನ್ನುವದನ್ನು ನಾವು ಸ್ಪಷ್ಟವಾಗಿ ಮುಂದೆ ಮನಗಾಣುತ್ತೇವೆ. ಸರಳವಾದ ವಿಷಯವಾದ್ದರಿಂದ ಸುಲಭವಾಗಿ ಅರ್ಥವಾಗುತ್ತದೆ.

ಆದರೆ ಕೇವಲ ಮಾತ್ಸರ್ಯವನ್ನೇ ತುಂಬಿಕೊಂಡು, ತಾವೇ ದೊಡ್ಡವರು ಎಂದು ಪ್ರಚಾರ ಮಾಡಿಸಿಕೊಳ್ಳುವ ಕೆಲವರು ಶ್ರೀ ರಾಮಚಂದ್ರ-ತೀರ್ಥಶ್ರೀಪಾದಂಗಳವರು ಹೇಳಿದ್ದು ತಪ್ಪು ಎಂದು ಯಾವ ಆಧಾರವನ್ನೂ ಕೊಡದೆ ಅವರನ್ನು ನಿಂದಿಸಿದ್ದಾರೆ[2].

---

[2] ವ್ಯಕ್ತಿಯೊಬ್ಬರು ತಾವು ಪಾಠ ಮಾಡುವ ಸಂದರ್ಭದಲ್ಲಿ ರಾಮಚಂದ್ರತೀರ್ಥಶ್ರೀಪಾದಂಗಳವರ ವ್ಯಾಖ್ಯಾನ ತಪ್ಪು ಎಂದು ಯಾವ ಕಾರಣವನ್ನೂ ನೀಡದೇ ಹೇಳಿದ್ದಾರೆ. ಇದು ಸ್ವಗೋಷ್ಠೀನಿಷ್ಠ-ಪ್ರಲಾಪವಾದರೂ ಈ ರೀತಿಯಾದ ಮಾತಿನ ಹಿಂದಿನ ಉದ್ದೇಶ ದುಷ್ಟವಾಗಿರುವದರಿಂದ, ಮತ್ತು ಶ್ರೀಮದಾಚಾರ್ಯರ ಶಾಸ್ತ್ರದ ಅಗಾಧತೆಯ ಅನುಸಂಧಾನವಿರುವದರಿಂದ ಆವರ ಪ್ರಲಾಪವನ್ನು ಇಲ್ಲಿ ಖಂಡಿಸುತ್ತಿದ್ದೇನೆ.

ವಿಚಿತ್ರ ಎಂದರೆ ಶ್ರೀ ರಾಮಚಂದ್ರತೀರ್ಥ-ಶ್ರೀಪಾದಂಗಳವರು ಹೇಳಿದ ಅರ್ಥವೇ ಸಾಂಪ್ರದಾಯಿಕವಾದ ಅರ್ಥ. ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಪ್ರಾಧಾನ್ಯ ಎಂಬ ಅರ್ಥ ಯಾವ ಕೋಶದಲ್ಲಿಯೂ ಇಲ್ಲ. ರೂಢಿಯಲ್ಲಿಯೂ ಇಲ್ಲ. ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಎಂದರೆ ಪ್ರಾಚುರ್ಯ (ಸಂಖ್ಯೆಯಲ್ಲಿ ಹೆಚ್ಚಾಗಿರುವದು) ಎಂದೇ ಅರ್ಥ. ಆ ಅರ್ಥಕ್ಕೆ ಇಲ್ಲಿ ಯಾವ ಅನುಪಪತ್ತಿಯೂ ಇಲ್ಲ.

ಇದರ ಕುರಿತು ಈಗ ಚರ್ಚೆ ಆರಂಭಿಸೋಣ.

## ಪ್ರಾಯಿಕತ್ವ ಎಂದರೆ ಪ್ರಾಚುರ್ಯ ಎಂದೇ ಅರ್ಥ

ಪ್ರಾಯಿಕತ್ವ ಎಂಬ ಶಬ್ದ ನಿರ್ಮಾಣವಾಗುವದು ಪ್ರಾಯ ಎಂಬ ಶಬ್ದದಿಂದ.

ಪ್ರಾಯಃ ಎಂಬ ಅವ್ಯಯವೂ ಇದೆ. ಪ್ರಾಯಪಾಠ, ಪ್ರಾಯೋಪವೇಶ, ಪ್ರಾಯಶಃ, ಮುಂತಾದವುಗಳಲ್ಲಿ ಪ್ರಯುಕ್ತವಾಗಿರುವ, ಪ್ರಾಯೇಣ ಎಂಬ ಪ್ರಸಿದ್ಧರೂಪವನ್ನೂ ಪಡೆದಿರುವ ಪ್ರಾಯ ಎಂಬ ಪುಲ್ಲಿಂಗಶಬ್ದವೂ ಇದೆ[3].

ಅದು ಅವ್ಯಯವಾಗಿದ್ದಾಗಲೂ, ಶಬ್ದವಾಗಿದ್ದಾಗಲೂ ಅದಕ್ಕೆ ಇರುವ ಅರ್ಥ ಪ್ರಾಚುರ್ಯ ಎಂದು.

ಪ್ರಾಚುರ್ಯ ಎಂದರೆ ಹೆಚ್ಚಾಗಿರುವಿಕೆ, ಅಧಿಕವಾಗಿರುವಿಕೆ, ಬಾಹುಲ್ಯ ಎಂದರ್ಥ.

ಪುಲ್ಲಿಂಗವಾಗಿದ್ದಾಗ ಅದಕ್ಕೆ ಅನೇಕ ಅರ್ಥಗಳಿವೆ. ಮೊದಲನೆಯ ಅರ್ಥ — ಮರಣವಾಗುವವರೆಗೆ

---

[3] ರಾಮಾಯಣದಲ್ಲಿ "ಇಹೈವ ಪ್ರಾಯಮಾಸಿಷ್ಯೇ", ವೇದಗಳಲ್ಲಿ "ಪ್ರಾಯೇ ಪ್ರಾಯೇ" ಎಂಬಿತ್ಯಾದಿ ಪ್ರಯೋಗಗಳು ಕಂಡಿವೆ. ಹೆಚ್ಚಿನಂಶ ಏಕವಚನದಲ್ಲಿಯೇ ಪ್ರಯೋಗಗೊಳ್ಳುವ ಶಬ್ದ.

ಮಾಡುವ ಉಪವಾಸ. ಪರೀಕ್ಷಿತಮಹಾರಾಜರು ಪ್ರಾಯೋಪವೇಶ ಮಾಡಿದ ಎಂದರೆ ಸಾಯುವವರೆಗೆ ನಿರಾಹಾರವ್ರತವನ್ನು ಕೈಗೊಂಡರು  ಎಂದರ್ಥ.

ಎರಡನೆಯ ಅರ್ಥ ಮರಣ ಎಂದು.

ಮೂರನೆಯ ಅರ್ಥ ಸಮಾನ ಎಂದು.

ಮೇದಿನೀಕೋಶದಲ್ಲಿ ಈ ಮಾತು ಸ್ಪಷ್ಟವಾಗಿದೆ —

> **ಪ್ರಾಯೋ ಮರಣಾನಶನೇ**
> **ಮೃತ್ಯೌ ಬಾಹುಲ್ಯತುಲ್ಯಯೋಃ ಎಂದು.**

ಇದಲ್ಲದೇ ಶ್ರೀಮದಾಚಾರ್ಯರು ಆಕ್ಷೇಪಾವಧಾರಣ ಎಂಬ ಅರ್ಥವನ್ನೂ ಹೇಳಿದ್ದಾರೆ. ವೇದಗಳಲ್ಲಿ ಯುದ್ಧ ಎಂಬ ಅರ್ಥದಲ್ಲಿಯೂ ಪ್ರಯೋಗವಿದೆ.

## ಪ್ರಾಧಾನ್ಯ ಎಂಬ ಅರ್ಥ ಎಲ್ಲಿಯೂ ಇಲ್ಲ

ಆದರೆ ಪ್ರಾಧಾನ್ಯ ಎನ್ನುವ ಅರ್ಥವನ್ನು ಯಾವ ಕೋಶವೂ ಸಹಿತ ತಿಳಿಸುವದಿಲ್ಲ. ಶ್ರೀಮದಾಚಾರ್ಯರೂ ಹೇಳಿಲ್ಲ. ರೂಢಿಯಲ್ಲಿಯೂ ಇಲ್ಲ.

ನಮ್ಮ ರೂಢಿಯಲ್ಲಿಯೂ ಸಹ ನಾವು ಪ್ರಾಯಃ ಎನ್ನುವ ಶಬ್ದಕ್ಕೆ "ಬಹುತೇಕ, ಹೆಚ್ಚಾದ ಪಕ್ಷದಲ್ಲಿ" ಎಂಬ ಅರ್ಥವನ್ನೇ ಬಳಸುತ್ತೇವೆ.

**"ಸಜ್ಜನರ ಮನಸ್ಸಿನಲ್ಲಿ ಪ್ರಾಯಃ ಪಾಪಕರ್ಮದ ಕುರಿತು ಆಲೋಚನೆ ಮೂಡುವದಿಲ್ಲ"** ಎಂದರೆ ನಾವು ಏನರ್ಥ ಮಾಡಿಕೊಳ್ಳುತ್ತೇವೆ? ಸಜ್ಜನರು ಪಾಪ ಮಾಡಬೇಕೆಂದು ಪ್ರಧಾನವಾಗಿ ಆಲೋಚಿಸುವದಿಲ್ಲ, ಅಪ್ರಧಾನವಾಗಿ ಆಲೋಚಿಸುತ್ತಾರೆ ಎಂದು ಅರ್ಥ ಮಾಡಿಕೊಳ್ಳುತ್ತೀವೆಯೋ, ಅಥವಾ ಸಜ್ಜನರ ಮನಸ್ಸಿನಲ್ಲಿ ಬಹುತೇಕ ಪಾಪದ ಆಲೋಚನೆ ಮೂಡುವದಿಲ್ಲ, ಕದಾಚಿತ್ ಅವರಿಗೂ ಮೂಡುತ್ತದೆ ಎಂದು ಅರ್ಥ ಮಾಡಿಕೊಳ್ಳುತ್ತೀವೆಯೋ.

ಮತ್ತೊಂದು ಉದಾಹರಣೆ ನೋಡಿ —

**“ನಾನು ಪ್ರಾಯಃ ಎಂಟನೆಯ ತಾರೀಕು ಬರುತ್ತೇನೆ, ಇಲ್ಲದಿದ್ದರೆ ಒಂಭತ್ತನೆಯ ತಾರೀಕು ನಿಶ್ಚಿತವಾಗಿ ಬರುತ್ತೇನೆ”** ಎಂಬ ವಾಕ್ಯ ಏನು ಅರ್ಥವನ್ನು ಹೇಳುತ್ತದೆ. ನಾನು ಎಂಟನೆಯ ತಾರೀಕು ಬರುವ ಸಾಧ್ಯತೆ ಹೆಚ್ಚಿದೆ. ಅನಿವಾರ್ಯ ಸಂದರ್ಭದಿಂದ ಬರಲು ಸಾಧ್ಯವಾಗದಿದ್ದಲ್ಲಿ ಒಂಭತ್ತನೆಯ ತಾರೀಕು ನಿಶ್ಚಿತವಾಗಿ ಬರುತ್ತೇನೆ.

ಮತ್ತೂ, ಪ್ರಾಯಃ ಎಂಬ ಶಬ್ದವನ್ನು ಬಳಸಿದಾಗ ಅಪ್ರಧಾನ ಎನ್ನುವ ಶಬ್ದ ಜೊತೆಯಲ್ಲಿ ಬಳಕೆಯಾಗುವದಿಲ್ಲ. ಕದಾಚಿತ್, ಕ್ವಚಿತ್ (ಕೆಲವು ಸಂದರ್ಭಗಳಲ್ಲಿ) ಎಂಬ ಶಬ್ದವೇ ಜೊತೆಯಲ್ಲಿ ಬಳಕೆಯಾಗುತ್ತದೆ[4].

---

[4] ಇದಕ್ಕೂ ಶ್ರೀಮದಾಚಾರ್ಯರ ವಚನವೇ ಪ್ರಮಾಣವಿದೆ. ಆಚಾರ್ಯರು ಸೂತ್ರಭಾಷ್ಯದಲ್ಲಿ ಹೇಳುತ್ತಾರೆ — ಅವೃದ್ಧಿಹ್ರಾಸರೂಪತ್ವಂ ಮುಕ್ತಾನಾಂ ಪ್ರಾಯಿಕಂ ಭವೇತ್. ಕಾದಾಚಿತ್ಕವಿಶೇಷಸ್ತು ನೈವ ತೇಷಾಂ ನಿಷಿಧ್ಯತೇ ಎಂದು. ಅಂದರೆ ಮುಕ್ತರಾದ ಬಳಿಕ ಬಹುತೇಕ ವೃದ್ಧಿಹ್ರಾಸಗಳಿರುವದಿಲ್ಲ. ಯಾವಾಗಲೋ ಒಮ್ಮೆ ಉಂಟಾಗುವ ವೃದ್ಧಿಹ್ರಾಸವನ್ನು ಶಾಸ್ತ್ರ ನಿಷೇಧಿಸುವದಿಲ್ಲ. ಅಂದರೆ ಪ್ರಾಯಃ ಎನ್ನುವದಕ್ಕೆ ಕದಾಚಿತ್, ಕ್ವಚಿತ್, ಕಥಂಚಿತ್ ಇತ್ಯಾದಿಗಳು ವಿರುದ್ಧಪದಗಳೆಂದು ಸಿದ್ಧವಾದವು.

**“ಪ್ರಾಯಃ ಅವರು ಇಷ್ಟು ಹೊತ್ತಿಗೆ ಹೊರಟು ಬಿಟ್ಟಿರುತ್ತಾರೆ, ಇದ್ದರೆ ಮಾತನಾಡಿಸಿಕೊಂಡು ಬರೋಣ”** ಎಂಬ ವಾಕ್ಯವನ್ನು ನೋಡಿ. ಹೆಚ್ಚಿನಂಶ ಅವರು ಇರುವಿದಿಲ್ಲ. ಇದ್ದ ಪಕ್ಷದಲ್ಲಿ ಮಾತನಾಡಿಸಿಕೊಂಡು ಬರೋಣ ಎಂದೇ ಅರ್ಥವನ್ನು ನಾವು ತಿಳಿಯುತ್ತೇವೆ. ಪ್ರಧಾನವಾಗಿ ಹೊರಟುಬಿಟ್ಟಿರುತ್ತಾರೆ, ಅಪ್ರಧಾನವಾಗಿ ಮಾತನಾಡಿಸಿಕೊಂಡು ಬರುತ್ತೇವೆ ಎಂದು ಅರ್ಥವನ್ನು ಮಾಡಿಕೊಳ್ಳುವದಿಲ್ಲ.

ಅಂದರೆ ಪ್ರಾಯಃ ಎನ್ನುವದು ಹೆಚ್ಚಾಗಿರುವದು, ಬಾಹುಲ್ಯ, ಪ್ರಾಚುರ್ಯ ಎಂಬ ಅರ್ಥವನ್ನೇ ಹೇಳುತ್ತದೆ ಎನ್ನುವದು ನಿರ್ವಿವಾದವಾಗಿ ಸಿದ್ಧವಾಯಿತು. ಬಹುತೇಕ, ಹೆಚ್ಚಿನಂಶ ಎಂಬ ಅರ್ಥದಲ್ಲಿಯೇ ನಾವೆಲ್ಲರೂ ಅದನ್ನು ಬಳಸುವದು.

ಶಾಸ್ತ್ರದಲ್ಲಿ ಪ್ರಾಯಪಾಠ ಎಂಬ ಶಬ್ದದ ಬಳಕೆಯಿದೆ. ಇದಕ್ಕೆ ಪ್ರಧಾನಪಾಠ ಎಂದು ಯಾರೂ ಅರ್ಥವನ್ನು ಹೇಳುವದಿಲ್ಲ. ಅತೀ ಹೆಚ್ಚಿನ ಪಾಠಗಳು ಎಂದೇ ಅರ್ಥವನ್ನು ಹೇಳುತ್ತಾರೆ. ಮತ್ತು ಪ್ರಾಯಶಃ ಎಂದರೆ ಬಹುಶಃ ಎಂದೇ ಅರ್ಥವಲ್ಲವೇ.

## ಪ್ರಾಚುರ್ಯ ಎಂದು ಆಚಾರ್ಯರೇ ಅರ್ಥ ಹೇಳಿದ್ದಾರೆ

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರೂ ಸಹ ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಪ್ರಾಚುರ್ಯ ಎಂಬ ಅರ್ಥವನ್ನೇ ಹೇಳಿದ್ದಾರೆ —

ಕೇವಲ ಕೋಶಗ್ರಂಥಗಳಲ್ಲ, ನಮ್ಮ ಬಳಕೆಯಲ್ಲ ಸ್ವಯಂ ಶ್ರೀಮದಾಚಾರ್ಯರೂ ಸಹ ಈ ಶಬ್ದಕ್ಕೆ ಇದೇ ಅರ್ಥವನ್ನು ಹೇಳುತ್ತಾರೆ.

ಭಾಗವತತಾತ್ಪರ್ಯನಿರ್ಣಯದ ನಾಲ್ಕನೆಯ ಸ್ಕಂಧದಲ್ಲಿ ಆಚಾರ್ಯರು ಅತ್ಯಂತ ಸ್ಪಷ್ಟವಾಗಿ **“ಪ್ರಾಯಃಪದಂ ಸ್ಯಾತ್ ಪ್ರಾಚುರ್ಯೇ”** ಎಂದು ಪ್ರಾಯಃ ಎನ್ನುವ ಶಬ್ದಕ್ಕೆ ಪ್ರಾಚುರ್ಯ ಎಂಬ ಅರ್ಥವಿದೆ ಎಂದು ಅಭಿಧಾನವನ್ನೇ ಪ್ರಮಾಣವನ್ನಾಗಿ ನೀಡಿದ್ದಾರೆ.

## ಆಚಾರ್ಯರ ಪ್ರಯೋಗಗಳು

ಆಹೀಗೆ ಪ್ರಮಾಣಪುರಸ್ಸರವಾಗಿ ಆಚಾರ್ಯರು ಅರ್ಥವನ್ನು ಹೇಳಿ ಬಾಹುಲ್ಯ ಎನ್ನುವ ಅರ್ಥದಲ್ಲಿಯೇ ಪ್ರಾಯಃ ಎನ್ನುವ ಶಬ್ದವನ್ನು ಬಳಸುತ್ತಾರೆ.

ಉದಾಹರಣೆಗಳನ್ನು ನೋಡಿ —

ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು **"ಹೇತವೋಽಪಿಹಿ ಪಾಪಸ್ಯ ನ ಪ್ರಾಯಃ ಫಲಭಾಗಿನಃ"** ಎಂದು ಹೇಳಿದ್ದಾರೆ. ದೇವತೆಗಳು ಜೀವರಲ್ಲಿ ನಿಂತು  ಪಾಪಕರ್ಮಗಳನ್ನು ಮಾಡಿಸಿದರೂ ಪ್ರಾಯಃ ಆ ಪಾಪದ ಫಲವನ್ನು ಪಡೆಯುವದಿಲ್ಲ ಎಂದು. ಅಲ್ಲಿ ಪ್ರಧಾನವಾಗಿ ಪಾಪಫಲವನ್ನು ಪಡೆಯುವದಿಲ್ಲ, ಅಪ್ರಧಾನವಾಗಿ ಪಡೆಯುತ್ತಾರೆ ಎಂದು ಅರ್ಥ ಮಾಡಿಕೊಳ್ಳುತ್ತೇವೆಯೋ ಅಥವಾ ಬಹುತೇಕ ಸಂದರ್ಭಗಳಲ್ಲಿ ಅವರು ಪಾಪಫಲವನ್ನು ಪಡೆಯುವದಿಲ್ಲ, ಆದರೆ ಕೆಲವು ಸಂದರ್ಭಗಳಲ್ಲಿ (ಕರ್ತವ್ಯಬುದ್ಧಿಯಿಂದ ಪ್ರೇರಿಸದೇ,

ದ್ವೇಷಬುದ್ಧಿಯಿಂದ ಪ್ರೇರಿಸಿದಾಗ) ಪಡೆಯುತ್ತಾರೆ ಎಂದು ಅರ್ಥ ಮಾಡಿಕೊಳ್ಳುತ್ತೇವೆಯೋ.

ಮತ್ತೊಂದು ಪ್ರಯೋಗ ನೋಡಿ —

> **"ಇತ್ಯಾದಿ ಸ್ವಪ್ನದೃಷ್ಟಂ ಯತ್ ಪ್ರಾಯಃ ಸತ್ಯಮಭೂದಿತಿ"**

ಅಶ್ವತ್ಥಾಮಾಚಾರ್ಯರು ತಮ್ಮ ಸ್ವಪ್ನದಲ್ಲಿ ಬಂದದ್ದು ಪ್ರಾಯಃ ಸತ್ಯವಾಯಿತು ಎಂದು ಯೋಚಿಸುತ್ತ ನಡೆದುಹೋದರು ಎಂದು ಆಚಾರ್ಯರು ಹೇಳಿದ್ದಾರೆ. ಇಲ್ಲಿ ಸ್ವಪ್ನ ಪ್ರಧಾನವಾಗಿ ಸತ್ಯವಾಯಿತು ಎಂದು ಅರ್ಥ ಮಾಡಿಕೊಳ್ಳುತ್ತೇವೆಯೋ ಅಥವಾ ಕನಸಿನಲ್ಲಿ ಬಹ್ವಂಶ ಸತ್ಯವಾಯಿತು, ಕೆಲವು ಆಗಲಿಲ್ಲ ಎಂದು ಅರ್ಥ ಮಾಡಿಕೊಳ್ಳುತ್ತೇವೆಯೋ.

## ಪದ್ಮನಾಭತೀರ್ಥರೂ ಪ್ರಾಚುರ್ಯ ಎಂದೇ ಹೇಳಿದ್ದಾರೆ

ಶ್ರೀ ಪದ್ಮನಾಭತೀರ್ಥರೂ ಸಹ ಪ್ರಾಚುರ್ಯ ಎಂದೇ ಅರ್ಥವನ್ನು ಹೇಳಿದ್ದಾರೆ

ಸನ್ನ್ಯಾಯರತ್ನಾವಲಿಯಲ್ಲಿ ಶ್ರೀ ಪದ್ಮನಾಭತೀರ್ಥರ ಸ್ಪಷ್ಟವಾದ ವಚನವಿದೆ — **"ಬಾಹುಲ್ಯೇನ ಪಲವಿಚಾರಿತ್ವಾತ್ ಅಸ್ಯ ಅಧ್ಯಾಯ್ಯ ಫಲಾಧ್ಯಾಯತ್ವಂ ನ ವಿರುಧ್ಯತೇ"** ಎಂದು. ಭಾಷ್ಯದಲ್ಲಿನ **ಪ್ರಾಯಿಕತ್ವಾತ್** ಎನ್ನುವ ಶಬ್ದಕ್ಕೆ ಶ್ರೀ ಪದ್ಮನಾಭತೀರ್ಥರು **ಬಾಹುಲ್ಯ** ಎಂದೇ ಅರ್ಥವನ್ನು ಹೇಳುತ್ತಿದ್ದಾರೆ. ಪ್ರಾಧಾನ್ಯ ಎಂದಲ್ಲ.

ಇನ್ನು ಸ್ವಯಂ ಟೀಕಾಕೃತ್ಪಾದರೂ ಸಹ ಪ್ರಾಚುರ್ಯ ಎನ್ನುವ ಅರ್ಥದಲ್ಲಿಯೇ ಪ್ರಾಯೇಣ ಎನ್ನುವ ಶಬ್ದವನ್ನು ಬಳಸಿದ್ದಾರೆ —

ಹೀಗೆ ಪ್ರಾಯ, ಪ್ರಾಯಃ, ಪ್ರಾಯೇಣ, ಪ್ರಾಯಿಕ ಎನ್ನುವ ಎಲ್ಲ ಶಬ್ದಗಳಿಗೂ ಪ್ರಾಚುರ್ಯ ಎಂಬ ಅರ್ಥದಲ್ಲಿಯೇ ಪ್ರಮಾಣವಿದೆ, ಅದೇ ಅರ್ಥದಲ್ಲಿ ಲೌಕಿಕರು, ಕವಿಗಳು, ವ್ಯಾಖ್ಯಾನಕಾರರು ಮತ್ತು

ಶ್ರೀಮದಾಚಾರ್ಯರು ಪ್ರಯೋಗಗಳನ್ನು ಮಾಡಿದ್ದಾರೆ.

**ಪ್ರಾಯಃ ಮುಂತಾದ ಶಬ್ದಗಳಿಗೆ ಪ್ರಾಧಾನ್ಯ ಎಂಬ ಅರ್ಥವಿದೆ ಎನ್ನುವದಕ್ಕೆ ಯಾವ ಕೋಶದ ಪ್ರಮಾಣವೂ ಇಲ್ಲ. ಪ್ರಾಧಾನ್ಯ ಎನ್ನುವ ಅರ್ಥದಲ್ಲಿ ಯಾರೂ ಸಹಿತ ಪ್ರಯೋಗ ಮಾಡಿಲ್ಲ. ಪ್ರಮಾಣ, ಪ್ರಯೋಗಗಳು ಇದ್ದಲ್ಲಿ ಯಾರಾದರೂ ತೋರಿಸಿಕೊಡಲಿ.**

## ಯಾದವಾರ್ಯರ ವ್ಯಾಖ್ಯಾನವನ್ನು ಹೊಂದಿಸುವ ರೀತಿ

ಹಾಗಾದರೆ ಶ್ರೀ ರಘೂತ್ತಮತೀರ್ಥರ ಮತ್ತು ಶ್ರೀ ಯಾದವಾರ್ಯರ ವ್ಯಾಖ್ಯಾನ ತಪ್ಪೇ? ಖಂಡಿತ ಅಲ್ಲ. ಒಂದು ವಿಷಯವನ್ನು ಪೂರ್ಣ ಅಧ್ಯಯನ ಮಾಡದೇ, ತಮ್ಮವರು ಬೇರೆಯವರು ಎಂದು ಭೇದ ಮಾಡುತ್ತ, ಮಾತ್ಸರ್ಯಕ್ಕೆ ಒಳಗಾಗಿ ಪ್ರಾಚೀನ ಆಚಾರ್ಯರನ್ನು ನಿಂದಿಸುವದು ಅವರ ದಾರಿಯಷ್ಟೇ ಹೊರತು ಸರ್ವಥಾ ಸಾಧಕರ ದಾರಿಯಲ್ಲ.

ಯಾದವಾರ್ಯರು ಆ ರೀತಿ ಹೇಳುವದಕ್ಕೂ ಸಹ ಒಂದು ಕಾರಣವಿದೆ. ಶ್ರೀ ಭಾಷ್ಯದೀಪಿಕಾಚಾರ್ಯರು ತಮ್ಮ ಪ್ರಯೋಗಕೌಶಲದಿಂದ ಈ ಅರ್ಥವನ್ನು ಹೊಂದಿಸುವ ಬಗೆಯನ್ನು ತಿಳಿಸಿ ಕೊಟ್ಟಿದ್ದಾರೆ. ಅದನ್ನು ತಿಳಿಯೋಣ.

ಪ್ರಾಯಿಕ ಎನ್ನುವ ಶಬ್ದಕ್ಕೆ ಪ್ರಾಧಾನ್ಯ ಎನ್ನುವದು ವಾಚ್ಯಾರ್ಥವಲ್ಲ. ಅಂದರೆ ಆ ಶಬ್ದಕ್ಕೆ ಆ ಅರ್ಥವಿಲ್ಲ. ಆದರೆ, ಅದು ವಾಚ್ಯಾರ್ಥದಿಂದ ಸಿದ್ಧವಾಗುವ ಫಲಿತಾರ್ಥ.

**ಯಾವುದರಲ್ಲಿ ಪ್ರಾಚುರ್ಯ ಇದೆಯೋ ಸಾಮಾನ್ಯವಾಗಿ ಅಲ್ಲಿ ಪ್ರಾಧಾನ್ಯ ಇರುತ್ತದೆ. ಕರ್ಮಕ್ಷಯವನ್ನು ಪ್ರಚುರವಾಗಿ ಹೇಳಿದ್ದಾರೆ ಎಂಬ ಕಾರಣದಿಂದಲೇ ಕರ್ಮಕ್ಷಯ ಈ ಪಾದದ ಪ್ರಧಾನ ಅರ್ಥ ಎನ್ನುವದು ಸಿದ್ಧವಾಯಿತು. ಪ್ರಾಚುರ್ಯವಿದ್ದ ಕಾರಣ ಅದು ಪ್ರಧಾನವಾಯಿತು. ಹೀಗೆ ಪ್ರಾಚುರ್ಯದಿಂದ ಪ್ರಾಧಾನ್ಯ ಸಿದ್ಧವಾಯಿತು.**

ಈ ತತ್ವವನ್ನು ತಿಳಿಸಿಕೊಟ್ಟವರೂ ಸಹ ಶ್ರೀಮಟ್ಟೀಕಾಕೃತ್ಪಾದರೇ. ಶ್ರೀಮದಾಚಾರ್ಯರು ಗೀತಾಭಾಷ್ಯದ ಹದಿನಾಲ್ಕನೆಯ ಅಧ್ಯಾಯದಲ್ಲಿ — **“ಸಾಧನಂ ಪ್ರಾಧಾನ್ಯೇನ ಉತ್ತರೈರಧ್ಯಾಯೈಃ ವಕ್ತಿ”** ಎಂದು ಹೇಳಿದ್ದಾರೆ. ಆ ಮಾತಿಗೆ ವ್ಯಾಖ್ಯಾನ ಮಾಡುತ್ತ ಟೀಕಾಕೃತ್ಪಾದರು — **“ಪ್ರಾಚುರ್ಯಾ-ಪೇಕ್ಷಯಾ ಸಂಗ್ರಾಹಕಮೇತತ್”** ಎಂದು ವ್ಯಾಖ್ಯಾನ ಮಾಡುತ್ತಾರೆ.

ಹದಿನಾಲ್ಕನೆಯ ಅಧ್ಯಾಯದಿಂದ ಆರಂಭಿಸಿ ಹದಿನೆಂಟರವರೆಗೆ ಸಾಧನೆಯನ್ನೇ ಪ್ರಧಾನವಾಗಿ ಗೀತೆ ತಿಳಿಸುತ್ತದೆ ಎಂದು ಶ್ರೀಮದಾಚಾರ್ಯರ

ವಾಕ್ಯದ ಅರ್ಥ. ಹಾಗಾದರೆ ಮಧ್ಯದಲ್ಲಿ ದೇವರ ಮಹಿಮೆಯನ್ನೂ ಹೇಳಿದ್ದಾರಲ್ಲ ಎಂದು ಪ್ರಶ್ನೆ ಮಾಡಿದರೆ ಟೀಕಾಕೃತ್ಪಾದರು ಕೊಟ್ಟ ಉತ್ತರ — ಯಾವುದನ್ನು ಹೆಚ್ಚು ಹೇಳಿದ್ದಾರೆಯೋ ಅದನ್ನು ಪ್ರಧಾನ ಎಂದು ಗ್ರಹಿಸಿ ಇಲ್ಲಿ ಆಚಾರ್ಯರು ವಿಷಯ ನಿರೂಪಣೆ ಮಾಡುತ್ತಿದ್ದಾರೆ ಎಂದು.

ಶಾಸ್ತ್ರಕಾರರು ಒಂದು ವಿಷಯವನ್ನು ವಿಸ್ತಾರವಾಗಿ ನಿರೂಪಿಸಲು ಅದು ಪ್ರಧಾನವಾಗಿರಬೇಕು. **ಪ್ರಧಾನವಾದ್ದರಿಂದಲೇ ಅದನ್ನು ವಿಸ್ತಾರವಾಗಿ ನಿರೂಪಿಸುತ್ತಾರೆ, ವಿಸ್ತಾರವಾಗಿ ನಿರೂಪಿಸಿದ್ದರಂದಲೇ ಅದು ಪ್ರಧಾನ ಎಂದು ನಿರ್ಣಯವಾಗುತ್ತದೆ.**
ಆದ್ದರಿಂದ ಇಲ್ಲಿಯೂ ಸಹ ಕರ್ಮಕ್ಷಯವನ್ನು ವಿಸ್ತಾರವಾಗಿ ನಿರೂಪಿಸಿರುವದರಿಂದ ಅದು ಪ್ರಧಾನ, ಮತ್ತು ಆ ಫಲಕ್ಕಾಗಿ ಅದರ ಅಂತರಂಗಸಾಧನವನ್ನು ನಿರೂಪಿಸಿರುವದರಿಂದ ಸಾಧನ ಅಪ್ರಧಾನ ಎನ್ನುವದು ತಿಳಿಯುತ್ತದೆ.

ಅದಕ್ಕಾಗಿಯೇ ಶ್ರೀ ಭಾಷ್ಯದೀಪಿಕಾಚಾರ್ಯರು ಶಬ್ದಾರ್ಥವನ್ನು ಹೇಳುವಾಗ **“ಪ್ರಾಯಿಕತ್ವಾತ್**

**ಪ್ರಾಚುರ್ಯೇಣ**” ಎಂದೇ. ಮುಂದೆ ಫಲಿತಾರ್ಥವನ್ನು ಹೇಳಬೇಕಾದರೆ ಕಾರ್ತ್ಸ್ನ್ಯೇನ (ಪರಿಪೂರ್ಣವಾಗಿ)[5] ಮತ್ತು ಪ್ರಾಧಾನ್ಯೇನ ಎಂಬ ಎರಡು ಅರ್ಥವನ್ನು ಹೇಳುತ್ತಾರೆ.

ಹೀಗಾಗಿ ಪ್ರಾಯಿಕ ಎನ್ನುವ ಶಬ್ದಕ್ಕೆ ಪ್ರಧಾನ ಎಂಬ ಅರ್ಥವಿಲ್ಲದಿದ್ದರೂ, ವಿಸ್ತಾರವಾಗಿ ನಿರೂಪಿಸಿರುವದರಿಂದಲೇ ಅದು ಪ್ರಧಾನ ಎಂದು ಸಿದ್ಧವಾಗುತ್ತದೆಯಾದ್ದರಿಂದ ಪ್ರಾಯಿಕತ್ವ ಎನ್ನುವದಕ್ಕೆ ಪ್ರಾಧಾನ್ಯ ಎನ್ನುವ ಅರ್ಥವನ್ನು ಯಾದವಾರ್ಯರು ಹೇಳಿದ್ದಾರಷ್ಟೇ ಹೊರತು, ಪ್ರಧಾನ್ಯ ಎನ್ನುವದು ಆ ಶಬ್ದದ ಅರ್ಥವಲ್ಲ. ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಪ್ರಾಚುರ್ಯ ಎನ್ನುವದೇ ಸಾಂಪ್ರದಾಯಿಕವಾದ, ಕೋಶಸಮ್ಮತವಾದ, ಲೋಕಸಮ್ಮತವಾದ ವಾಚ್ಯಾರ್ಥ.

---

[5] ಪ್ರಾಧಾನ್ಯದಂತೆ ಕಾರ್ತ್ಸ್ನ್ಯವೂ ಪ್ರಾಯಿಕತ್ವ ಎನ್ನುವ ಶಬ್ದದ ಫಲಿತಾರ್ಥ. ಆಚಾರ್ಯರು ಭಾಗವತತಾತ್ಪರ್ಯನಿರ್ಣಯದಲ್ಲಿ ಮಾಡಿರುವ ವ್ಯಾಖ್ಯಾನದ ಆಧಾರದ ಮೇಲೆ ಶ್ರೀ ಭಾಷ್ಯದೀಪಿಕಾಚಾರ್ಯರು ಆ ಅರ್ಥವನ್ನು ತಿಳಿಸಿದ್ದಾರೆ. ಭಾಷ್ಯದ ಅರ್ಥಾನುಸಂಧಾನವನ್ನು ಮಾಡುವಾಗ ಆ ವಿಷಯವನ್ನು ಪೂರ್ಣವಾಗಿ ತಿಳಿಯೋಣ.

ಶ್ರೀಮದಾಚಾರ್ಯರು, ಶ್ರೀ ಪದ್ಮನಾಭತೀರ್ಥರು, ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಮತ್ತು ಶ್ರೀಮಟ್ಟೀಕಾಕೃತ್ಪಾದರು ಪ್ರಾಯಃ ಎನ್ನುವ ಶಬ್ದವನ್ನು ಪ್ರಾಚುರ್ಯ ಎಂಬ ಅರ್ಥದಲ್ಲಿಯೇ ಬಳಸಿದ್ದಾರೆಯಾದ್ದರಿಂದ ಶ್ರೀರಾಮಚಂದ್ರ-ತೀರ್ಥಶ್ರೀಪಾದಂಗಳವರ ವ್ಯಾಖ್ಯಾನ ಸಾಂಪ್ರದಾಯಿಕ ವ್ಯಾಖ್ಯಾನ. ಈ ಯಾವ ಮಹಾನುಭಾವರೂ ಎಲ್ಲಿಯೂ ಪ್ರಾಧಾನ್ಯ ಎಂಬ ಅರ್ಥದಲ್ಲಿ ಪ್ರಾಯಶಬ್ದವನ್ನು ಬಳಸಿಲ್ಲ. ಬಳಸಿದ್ದರೆ ತೋರಿಸಿಕೊಡಲಿ.

ಆಚಾರ್ಯರು ಭಾಗವತತಾತ್ಪರ್ಯದಲ್ಲಿ ಉದಾಹರಿಸಿರುವ ಪ್ರಮಾಣ, ಮೇದಿನೀ, ವಿಶ್ವ, ಅಮರ ಮುಂತಾದ ಕೋಶಗಳು ಪ್ರಾಯಶಬ್ದಕ್ಕೆ ಪ್ರಾಚುರ್ಯ ಎಂದು ಅರ್ಥವನ್ನು ಹೇಳುತ್ತವೆಯೇ ಹೊರತು ಪ್ರಾಧಾನ್ಯ ಎಂಬ ಅರ್ಥವನ್ನು ಯಾವ ಕೋಶಗಳೂ ಹೇಳಿಲ್ಲ. ಹೇಳಿದ್ದರೆ ತೋರಿಸಿಕೊಡಲಿ. ಎಲ್ಲ ಲೌಕಿಕರೂ ಪ್ರಾಯಃ ಎನ್ನುವ ಶಬ್ದವನ್ನು ಬಹುತೇಕ, ಬಹ್ವಂಶ, ಪ್ರಾಚುರ್ಯ ಎನ್ನುವ ಅರ್ಥದಲ್ಲಿಯೇ ಬಳಸುತ್ತಾರೆಯೇ ಹೊರತು ಪ್ರಾಧಾನ್ಯ ಎಂಬ ಅರ್ಥದಲ್ಲಿ ಯಾರೂ

ಬಳಸುವದಿಲ್ಲ. ಬಳಸಿದ್ದರೆ, ಆ ರೀತಿಯ ಪ್ರಯೋಗವನ್ನು ಪ್ರತಿಪಾದನೆ ಮಾಡಲಿ.

## ಕರ್ಮಕ್ಷಯವೇ ವಿಸ್ತಾರವಾಗಿ ನಿರೂಪಿತವಾಗಿರುವದು

ಇದೆಲ್ಲ ಸರಿ. ಆದರೆ ಪ್ರಾಯಿಕತ್ವ ಎನ್ನುವ ಶಬ್ದಕ್ಕೆ ಪ್ರಾಚುರ್ಯ ಎಂಬ ಅರ್ಥವನ್ನು ಹೇಳಿದರೆ ದೊಡ್ಡ ಸಮಸ್ಯೆ ಇದೆಯಲ್ಲ. ವೇದವ್ಯಾಸದೇವರು ಏಳು ಅಧಿಕರಣಗಳಲ್ಲಿ ಸಾಧನೆಯನ್ನು ಹೇಳಿ, ಒಂದೇ ಅಧಿಕರಣದಲ್ಲಿ ಕರ್ಮಕ್ಷಯವನ್ನು ಹೇಳಿದ್ದಾರೆ. ಅಂದ ಮೇಲೆ ವಿಸ್ತಾರವಾಗಿ ಹೇಳಿದ್ದು ಸಾಧನೆಯನ್ನೇ. ಕರ್ಮಕ್ಷಯವನ್ನಲ್ಲ. ಹೀಗಿದ್ದಾಗ ಇದು ಸಾಧನಪಾದ ಎಂದು ಕರೆಸಿಕೊಳ್ಳಬೇಕೇ ಹೊರತು ಕರ್ಮಕ್ಷಯಪಾದ ಎಂದಲ್ಲ.

ಈ ಆಕ್ಷೇಪಕ್ಕೆ ಶ್ರೀ  ರಾಮಚಂದ್ರತೀರ್ಥ-ಶ್ರೀಪಾದಂಗಳವರು ದಿವ್ಯವಾದ ಸಮಾಧಾನವನ್ನು ನೀಡಿದ್ದಾರೆ. ಪಾಠ ಎಂದರೆ ಶ್ರೀಮದ್ ವ್ಯಾಸರಾಜಮಠದ ಪಾಠ ಎಂದು ವಿದ್ವತ್ ಪ್ರಪಂಚದಲ್ಲಿ ಪ್ರಸಿದ್ಧಿ ದೊರೆತಿರುವದೇ ಇಂತಹ

ಕಾರಣಗಳಿಂದ. ಕಾರಣ ಯಾವ ವ್ಯಾಖ್ಯಾನಕಾರರೂ ತಿಳಿಸಿದ ಪರಿಶುದ್ಧವಾದ, ಸಾಂಪ್ರದಾಯಿಕವಾದ ದಿವ್ಯ ಅರ್ಥವನ್ನು ಶ್ರೀ ರಾಮಚಂದ್ರತೀರ್ಥಶ್ರೀಪಾದಂಗಳವರು ನಮಗೆ ಕಾರುಣ್ಯದಿಂದ ತಿಳಿಸಿ ಹೇಳುತ್ತಾರೆ.

“नच वाच्यम्, अस्मिन्नध्याये प्रायेण फलस्यैव निरूपितत्वेन अस्य फलाध्यायत्वसम्भवेऽपि एतत्पादस्य कर्मक्षयपादत्वं न सम्भवति। कर्मक्षयस्य “तदधिगम उत्तरपूर्वाघयोरश्लेषविनाशौ तद्व्यपदेशात्” इत्येकस्मिन्नेव अधिकरणे निरूपितत्वेन साधनस्य च “आवृत्तिरसकृदुपदेशात्” इत्यादिषु सप्तस्वधिकरणेषु विचारितत्वेन कर्मक्षयनिरूपणस्य प्रायिकत्वाभावदिति। कर्मक्षयप्रतिपादकसूत्राणां साधनप्रतिपादकसूत्राणां च अक्षरगणनायां साधनप्रतिपादकसूत्रेभ्यः कर्मक्षयप्रतिपादकसूत्राणां च आधिक्यस्य सत्त्वेन कर्मक्षयनिरूपणस्य प्रायिकत्वोपपत्त्या अस्य कर्मक्षयपादत्वसम्भवात्” ಎಂದು.

ಶ್ರೀಗುರುಗಳ ಅಭಿಪ್ರಾಯ ಹೀಗಿದೆ — ನಿಜ, ಸಾಧನವನ್ನು ಏಳು ಅಧಿಕರಣಗಳಲ್ಲಿ, ಕರ್ಮಕ್ಷಯವನ್ನು ಒಂದೇ ಅಧಿಕರಣದಲ್ಲಿ ಹೇಳಿದ್ದಾರೆ. ಆದರೆ ಅಧಿಕರಣಗಳ ಸಂಖ್ಯೆಯಿಂದ ಆಧಿಕ್ಯವನ್ನು ಹೇಳುವದಲ್ಲ. ಅಕ್ಷರಗಳ ಸಂಖ್ಯೆಯಿಂದಲೇ ಹೇಳಬೇಕು.

ಕಾರಣ, ಗೀತೆಯಲ್ಲಿ ಆಧಿಕ್ಯವನ್ನು ಹೇಳುವಾಗ ಶ್ಲೋಕಗಳ ಆಧಿಕ್ಯವನ್ನು ಗ್ರಹಿಸುತ್ತೇವೆ. ಕಾರಣ, ಶ್ಲೋಕಗಳು ಅಧಿಕವಾಗಿದ್ದರೆ ಸಹಜವಾಗಿಯೇ ಅಕ್ಷರಗಳು ಅಧಿಕವಾಗುತ್ತವೆ. ಏಕೆಂದರೆ ಒಂದು ಶ್ಲೋಕದಲ್ಲಿ ಇಷ್ಟು ಅಕ್ಷರಗಳಿರಲೇಬೇಕು ಎಂಬ ನಿಯಮವಿದೆ. ಆದರೆ, ಸೂತ್ರಗಳಲ್ಲಿ ಹಾಗಲ್ಲ, ಒಂದು ಸೂತ್ರದಲ್ಲಿ ಇಷ್ಟೇ ಅಕ್ಷರಗಳಿರಬೇಕು ಎಂಬ ನಿಯಮವಿಲ್ಲ. ತತ್ವವನ್ನು ತಿಳಿಸಲು ಎಷ್ಟು ಅಕ್ಷರಗಳಿರಬೇಕೋ ಅಷ್ಟು ಅಕ್ಷರಗಳನ್ನು ಮಾತ್ರ ಬಳಸಿ ಸೂತ್ರಗಳನ್ನು ನಿರ್ಮಾಣ ಮಾಡಬೇಕು. ಹೀಗಾಗಿ ಸಾಧನೆಯನ್ನು ತಿಳಿಸುವ 12 ಸೂತ್ರಗಳಲ್ಲಿ ಕೇವಲ 98 ಅಕ್ಷರಗಳಿರುವದರಿಂದ, ಕರ್ಮಕ್ಷಯವನ್ನು ಪ್ರತಿಪಾದಿಸುವ 7 ಸೂತ್ರಗಳಲ್ಲಿ

102 ಅಕ್ಷರಗಳಿರುವದರಿಂದ ಕರ್ಮಕ್ಷಯವೇ ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಸಾಧನೆಯಲ್ಲ.

## ಸೂತ್ರಗಳಲ್ಲಿ ಅಕ್ಷರಗಣನೆಯ ಸಾಂಪ್ರದಾಯಿಕ ಕ್ರಮ

ಶ್ರೀರಾಮಚಂದ್ರತೀರ್ಥಶ್ರೀಪಾದಂಗಳವರ ಮೇಲಿನ ಮಾತ್ಸರ್ಯ ಕೆಲವರಿಗೆ ಯಾವ ಪ್ರಮಾಣದಲ್ಲಿದೆ ಎಂದರೆ 12 ಸೂತ್ರಗಳಲ್ಲಿ ಇರುವದು 98 ಅಕ್ಷರಗಳಲ್ಲ, 223  ಅಕ್ಷರಗಳು. ಕರ್ಮಕ್ಷಯ ಸೂತ್ರಗಳಲ್ಲಿ ಇರುವದು 102 ಅಕ್ಷರಗಳಲ್ಲ, 219 ಅಕ್ಷರಗಳು. ಹೀಗಾಗಿ ರಾಮಚಂದ್ರತೀರ್ಥರ ವ್ಯಾಖ್ಯಾನ ತಪ್ಪು ಎಂದು ತಮ್ಮ ಶಿಷ್ಯರ ಮುಂದೆ ಸ್ವಗೋಷ್ಠೀಪ್ರಲಾಪವನ್ನು ನಡೆಸಿದ್ದಾರೆ.

ಶ್ರೀರಾಮಚಂದ್ರತೀರ್ಥಶ್ರೀಪಾದಂಗಳವರು "ತದಧಿಗಮ" ಎಂದರೆ ಐದು ಅಕ್ಷರಗಳು ಎಂದು ಪರಿಗಣಿಸಿದ್ದಾರೆ. ಆದರೆ, ತ ಎಂದರೆ ತ್ ಮತ್ತು ಅ ಎಂಬ ಎರಡು ಅಕ್ಷರ ತಾನೇ. ಹೀಗಾಗ ತದಧಿಗಮ ಎಂದರೆ 10 ಅಕ್ಷರಗಳು ಎನ್ನುವದು ಈ ಜನರ ವಾದ.

ನಮಗಿಂತ ಹಿರಿಯರಲ್ಲಿ ನಾವು ಮಾತ್ಸರ್ಯವನ್ನು ಮಾಡಿದಾಗ ತಿಳಿದಿರುವ ಜ್ಞಾನವನ್ನೂ ಕಳೆದುಕೊಳ್ಳುತ್ತೇವೆ ಎನ್ನುವ ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ಇದು ಜ್ವಲಂತ ಸಾಕ್ಷಿ.

ನಿಜ. ತ ಎನ್ನುವಲ್ಲಿ ಎರಡು ಅಕ್ಷರಗಳಿವೆ. ಆದರೆ ಅದು ವ್ಯಾಕರಣಶಾಸ್ತ್ರದ ಪರಿಧಿಯಲ್ಲಿ. ವೇದಾಂತಶಾಸ್ತ್ರದ ಪರಿಧಿಯಲ್ಲಿ ತ ಎಂದರೆ ಒಂದೇ ಅಕ್ಷರ. ಶ್ರೀಮದಾಚಾರ್ಯರು ಕೃಷ್ಣಮಂತ್ರಾದಿ ಮಂತ್ರಗಳನ್ನು ಉಪದೇಶಿಸಿದ್ದಾರೆ. ಕೃಷ್ಣಮಂತ್ರವನ್ನು ಷಡಕ್ಷರ ಮಂತ್ರ ಅಂದರೆ ಆರು ಅಕ್ಷರಗಳ ಮಂತ್ರ ಎಂದೇ ಆಚಾರ್ಯರು ಕರೆದಿದ್ದಾರೆ — **"ಸಕಾಮಃ ಸ್ವಯಮುದ್ದೇಶೀ ನತ್ಯಂತೋಽಯಂ ಷಡಕ್ಷರಃ"** ಎಂದು. ಅಲ್ಲಿರುವದು ಕ್ಲೀಂ ಕೃಷ್ಣಾಯ ನಮಃ ಎಂದು. ಇವರ ಪ್ರಕಾರ ಇದು ಹದಿನಾರು ಅಕ್ಷರಗಳಾಗಬೇಕು. ಆದರೆ ಆಚಾರ್ಯರು ಇದನ್ನು ಷಡಕ್ಷರ ಎಂದು ಕರೆದಿದ್ದಾರೆಯೇ ಹೊರತು ಷೋಡಶಾಕ್ಷರ ಮಂತ್ರ ಎಂದು ಕರೆದಿಲ್ಲ. ಹಾಗೆಯೇ ಶಿವಾಯ ನಮಃ ಎನ್ನುವದು ಶಿವಪಂಚಾಕ್ಷರೀ ಎನ್ನುವದು ಪ್ರತಿಯೊಬ್ಬರಿಗೂ ತಿಳಿದ ವಿಷಯ. ಇವರ ಪ್ರಕಾರ

ಅಲ್ಲಿರುವದು ಹನ್ನೊಂದು ಅಕ್ಷರಗಳು. ಐದಲ್ಲ. ಹಾಗಾದರೆ ಶಾಸ್ತ್ರ ಅದನ್ನು ಪಂಚಾಕ್ಷರೀ ಎಂದು ಹೇಗೆ ಕರೆಯಿತು. ಹಾಗೆಯೋ **ಚತುರ್ವಿಂಶತ್ಯಕ್ಷರಾ ಗಾಯತ್ರೀ** ಎಂದು ವೇದಗಳು ಹೇಗೆ ಕರೆದವು?

ಅಷ್ಟೇ ಅಲ್ಲ, ಸೂತ್ರಗಳ ಹಿಂದೆ ಮುಂದಿರುವ ಓಂಕಾರವನ್ನಿಟ್ಟುಕೊಂಡು ಅಕ್ಷರಗಳನ್ನು ಗಣನೆ ಮಾಡುವವರಿಗೂ ಇದೇ ಉತ್ತರ. ಮಂತ್ರಘಟಿತವಾದ ಓಂಕಾರವನ್ನು ಮಾತ್ರ ಅಕ್ಷರ ಎಂದು ಗ್ರಹಿಸಬೇಕು. ನಾರಾಯಣಮಂತ್ರದಲ್ಲಿ ಗ್ರಹಿಸುವಂತೆ. ಓಂ ನಮಃ ಶಿವಾಯ ಓಂ ಎಂಬಲ್ಲಿ ಓಂಕಾರವನ್ನು ಮಂತ್ರದ ಅಕ್ಷರವನ್ನಾಗಿ ಪರಿಗಣಿಸಬಾರದು. ಕಾರಣ ಅದು ಅದೃಷ್ಟಾರ್ಥಕವಾದ ಓಂಕಾರ, ದೃಷ್ಟಾರ್ಥಕವಾದದ್ದಲ್ಲ. ದೃಷ್ಟಾರ್ಥಕವಾಗಿರುವ ಪಕ್ಷದಲ್ಲಿಯೂ ಸಹಿತ ಶಿವಪಂಚಾಕ್ಷರಿಯನ್ನು ಪಂಚಾಕ್ಷರೀ ಎನ್ನುತ್ತೇವೆಯೇ ಹೊರತು ಸಪ್ತಾಕ್ಷರೀ ಎನ್ನುವದಿಲ್ಲ. ಗಾಯತ್ರಿಯನ್ನು ಷಡ್ವಿಂಶತ್ಯಕ್ಷರೀ ಎಂದು ಕರೆಯುವದೇ ಇಲ್ಲ.

ಪ್ರತಿಯೊಂದು ಸೂತ್ರವೂ ಮಂತ್ರ ಎನ್ನುವದು ಶ್ರೀಮದಾಚಾರ್ಯರ ಸಿದ್ಧಾಂತ. ಟೀಕಾಕೃತ್ಪಾದರು ಪ್ರತಿಪಾದಿಸಿರುವ ಆ ಸಂಪ್ರದಾಯಕ್ಕೆ ಅನುಗುಣವಾಗಿ ಶ್ರೀ ರಾಮಚಂದ್ರತೀರ್ಥ-ಶ್ರೀಪಾದಂಗಳವರು ಸ್ವರ-ಅರ್ಥವ್ಯಂಜನಯುಕ್ತವಾದ ವ್ಯಂಜನವನ್ನು ಒಂದೇ ಅಕ್ಷರ ಎಂದು ಗ್ರಹಿಸಿದ್ದಾರೆ. ಹೀಗಾಗಿ ಶ್ರೀರಾಮಚಂದ್ರತೀರ್ಥಶ್ರೀಪಾದಂಗಳವರ ವ್ಯಾಖ್ಯಾನವೇ ಸಾಂಪ್ರದಾಯಿಕ.

## ಎಲ್ಲದರ ಸಂಗ್ರಹ

ಪ್ರಾಯಿಕತ್ವ ಎನ್ನುವ ಶಬ್ದವನ್ನು ಪ್ರಾಚುರ್ಯ ಎಂಬ ಅರ್ಥದಲ್ಲಿಯೇ ನಾವೆಲ್ಲರೂ ಪ್ರಯೋಗ ಮಾಡುತ್ತೇವೆ.

ಪ್ರಾಯಿಕತ್ವ ಎಂದರೆ ಪ್ರಾಚುರ್ಯ ಎಂದೇ ಅರ್ಥ ಎಂದು ಕೋಶಗಳೂ ಹೇಳುತ್ತವೆ, ಶ್ರೀಮದಾಚಾರ್ಯರೂ ಹೇಳಿದ್ದಾರೆ. ಅದೇ ಅರ್ಥದಲ್ಲಿಯೇ ಪ್ರಯೋಗ ಮಾಡಿದ್ದಾರೆ.

ಪ್ರಾಯಿಕತ್ವ ಎಂಬ ಶಬ್ದಕ್ಕೆ ಪ್ರಾಧಾನ್ಯ ಎಂಬ ಅರ್ಥವನ್ನು ಕೋಶವೂ ಹೇಳುವದಿಲ್ಲ, ಶ್ರೀಮದಾಚಾರ್ಯರೂ ಹೇಳಿಲ್ಲ. ಲೌಕಿಕರೂ ಹಾಗೆ ಪ್ರಯೋಗ ಮಾಡುವದಿಲ್ಲ.

ವಿಷಯವನ್ನು ವಿಸ್ತಾರವಾಗಿ ಪ್ರತಿಪಾದನೆ ಮಾಡಿದ್ದರಿಂದ ಅದು ಪ್ರಧಾನ ಎಂದು ಸಿದ್ಧವಾಗುತ್ತದೆ. ಹೀಗಾಗಿ ಪ್ರಾಧಾನ್ಯ ಎನ್ನುವದು ಫಲಿತಾರ್ಥವೇ ಹೊರತು ವಾಚ್ಯಾರ್ಥವಲ್ಲ.

ಕರ್ಮಕ್ಷಯಪಾದದಲ್ಲಿ ಕರ್ಮಕ್ಷಯವನ್ನು ಪ್ರತಿಪಾದನೆ ಮಾಡುವ ಸೂತ್ರಗಳಲ್ಲಿ ಅಕ್ಷರಗಳ ಆಧಿಕ್ಯವಿದೆ. ಸಾಧನೆಯನ್ನು ಪ್ರತಿಪಾದನೆ ಮಾಡುವ ಸೂತ್ರಗಳಲ್ಲಿ ಅದಕ್ಕಿಂತ ಅಕ್ಷರಗಳು ಕಡಿಮೆ ಇವೆ. ಹೀಗಾಗಿ ವಿಸ್ತೃತವಾಗಿ ನಿರೂಪಿತವಾಗಿರುವದು ಕರ್ಮಕ್ಷಯವೇ ಹೊರತು ಸಾಧನೆಯಲ್ಲ. ಅದಕ್ಕಾಗಿಯೇ ಅದು ಕರ್ಮಕ್ಷಯಪಾದ, ಸಾಧನಪಾದವಲ್ಲ.

ವೇದಾಂತಸೂತ್ರಗಳು ಮಂತ್ರಗಳಾದ್ದರಿಂದ ಅಲ್ಲಿನ ಅಕ್ಷರಗಳನ್ನು ಗಣನೆ ಮಾಡಬೇಕಾದರೆ ಸ್ವರ,

ಅರ್ಧವ್ಯಂಜನಯುಕ್ತವಾದ ವ್ಯಂಜನವನ್ನು ಒಂದೇ ಅಕ್ಷರ ಎಂದು ಗಣನೆ ಮಾಡಬೇಕು. ಹೊರತು ವ್ಯಾಕರಣದಲ್ಲಿ ಮಾಡುವಂತೆ ಸ್ವರ-ವ್ಯಂಜನ, ಅರ್ಧವ್ಯಂಜನಾದಿಗಳನ್ನು ಪ್ರತ್ಯೇಕಪ್ರತ್ಯೇಕ ಅಕ್ಷರವನ್ನಾಗಿ ಅಲ್ಲ.

ಹೀಗೆ, ಅಕ್ಷರಗಳ ಗಣನೆಯನ್ನು ಮಾಡಿದಾಗ ಕರ್ಮಕ್ಷಯಸೂತ್ರಗಳಲ್ಲಿಯೇ ಅಕ್ಷರಪ್ರಾಚುರ್ಯ ಇರುವದರಿಂದ ಈ ಪಾದ ಕರ್ಮಕ್ಷಯಪಾದ ಎನ್ನುವದರಲ್ಲಿ ಯಾವ ಅನುಪಪತ್ತಿಯೂ ಇಲ್ಲ.

ಆದ್ದರಿಂದ ಪ್ರಾಯಿಕತ್ವ ಎನ್ನುವದಕ್ಕೆ ಪ್ರಾಚುರ್ಯ ಎನ್ನುವದು ಶ್ರೀಮದಾಚಾರ್ಯರು, ಪ್ರಾಚೀನವ್ಯಾಖ್ಯಾನಕಾರರು ಮತ್ತು ಟೀಕಾಕೃತ್ಪಾದರು ಹೇಳಿದ ಅರ್ಥವಾದ್ದರಿಂದ ಅದೇ ಆ ಅರ್ಥವನ್ನು ತಿಳಿಸುವ ಶ್ರೀ ರಾಮಚಂದ್ರತೀರ್ಥಶ್ರೀಪಾದಂಗಳವರ ವ್ಯಾಖ್ಯಾನವೇ ಸಾಂಪ್ರದಾಯಿಕವಾದ ವ್ಯಾಖ್ಯಾನ.

ಪ್ರಾಧಾನ್ಯ ಎನ್ನುವದು ಫಲಿತಾರ್ಥವಷ್ಟೇ ಹೊರತು ಸರ್ವಥಾ ವಾಚ್ಯಾರ್ಥವಲ್ಲ.

ಹೀಗೆ ಯಾವ ವ್ಯಾಖ್ಯಾನಕಾರರೂ ತಿಳಿಸಿದ ದಿವ್ಯವಾದ ಪ್ರಮೇಯವನ್ನು, ಶ್ರೀಮದಾಚಾರ್ಯರಿಗೆ, ಟೀಕಾಕೃತ್ಪಾದರಿಗೆ ಸಮ್ಮತವಾದ ಕ್ರಮದಲ್ಲಿ ತಿಳಿಸಿಹೇಳಿದ ಸಂಪ್ರದಾಯಾರ್ಥಕೋವಿದರಾದ ಶ್ರೀ ರಾಮಚಂದ್ರತೀರ್ಥಶ್ರೀಪಾದಂಗಳವರು ನಮ್ಮ ಮೇಲೆ ಪರಮಾನುಗ್ರಹ ಮಾಡಿ ತಮ್ಮ ಪರಮಾದ್ಭುತ ಕೃತಿಯ ಅರ್ಥಾನುಸಂಧಾನದ ಸೌಭಾಗ್ಯವನ್ನು ನಮಗೆ ಕರಣಿಸಲಿ ಎಂದು ಬೇಡಿಕೊಳ್ಳೋಣ.

ಈ ಚರ್ಚೆಯನ್ನು ವಿದ್ಯಾಸಿಂಹಾಸನಾಧೀಶ್ವರರಾದ ಸಕಲ ಗುರುಗಳ,  ಶ್ರೀ ರಾಮಚಂದ್ರತೀರ್ಥ-ಶ್ರೀಪಾದಂಗಳವರ, ಹಾಗೂ ಮುನಿತ್ರಯರ ಅಂತರ್ಯಾಮಿಯಾದ ವ್ಯಾಸರಾಮಾಭಿನ್ನ ಶ್ರೀ ಮೂಲಗೋಪಾಲಕೃಷ್ಣದೇವರ ಚರಣಕಮಲಗಳಿಗೆ ಸಮಗ್ರ ಜೀವದ ಭಕ್ತಿಯಿಂದ ಒಪ್ಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491